“ಶಾಲೆಗೆ ಶುದ್ಧ ಕುಡಿಯುವ ನೀರಿನ ಘಟಕ ಸಿಗದಿದ್ದರೆ, ನಾನು ಶಾಲೆಯನ್ನೇ ಬಿಡುವೆ”

ಬಸವಗೌಡ

ಸರ್ಕಾರಿ ಮಾದರಿ ಪ್ರಾಥಮಿಕ ಶಾಲೆ, ಹುಣಸಗಿ ಕ್ಯಾಂಪ್
ಸುರಪುರ ಬ್ಲಾಕ್, ಯಾದಗಿರಿ ಜಿಲ್ಲೆ, ಕರ್ನಾಟಕ ರಾಜ್ಯ

ಇದು ಒಬ್ಬ ನೀತಿವಂತನಾದ, ದೃಢ ಸಂಕಲ್ಪವುಳ್ಳ ಧೀರನ ಕಥೆ. ನಲವತ್ತೇಳರ ವಯಸ್ಸಿನ ಬಸವಗೌಡ ಚೌಧರಿ 1997ರಲ್ಲಿ ಆಗಿನ ಕಲ್ಬುರ್ಗಿ ಜಿಲ್ಲೆಯ ಶಹಾಪುರ ಬ್ಲಾಕಿನ ಹಳೇಪೇಠದ ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆಯಲ್ಲಿ ಶಿಕ್ಷಕರಾಗಿ ಸೇರಿದರು. ಪ್ರಾರಂಭದ ಅನೇಕ ವರ್ಷಗಳು ಬಸವಗೌಡರಿಗೆ ಅಪ್ರತಿಮವಾದ ಕಲಿಕೆಯ ಕಾಲವೆಂದೇ ಹೇಳಬೇಕು. ಅವರು ಅದೇ ಶಾಲೆಯಲ್ಲಿ 2002ರಲ್ಲಿ ಪ್ರಭಾರ

ಮುಖ್ಯೋಪಾಧ್ಯಾಯರಾದರು. ಹಳೇಪೇಠದಲ್ಲಿ ಹೆಚ್ಚಿನವರು ಬಡವರೇ, ಅಲ್ಲಿ ಮುಸ್ಲಿಮರ ಸಂಖ್ಯೆಯೇ ಜಾಸ್ತಿ. ಸಮುದಾಯದೊಂದಿಗೆ ಸೇರಿ ಕೆಲಸ ಮಾಡುವ ಹಾಗೂ ಮಕ್ಕಳು ಏನು ಮತ್ತು ಹೇಗೆ ಕಲಿಯುತ್ತಿದ್ದಾರೆಂದು ಅವರಿಗೆ ತಿಳಿಸಬೇಕಾದ ಅಗತ್ಯವನ್ನು ಗೌಡರು ಅಲ್ಲಿಯೇ ತಿಳಿದುಕೊಂಡರು.

ಹಳೇಪೇಠದಲ್ಲಿ ಹನ್ನೆರಡು ವರ್ಷಗಳನ್ನು ಕಳೆದ ಬಸವಗೌಡರು 2009ರಲ್ಲಿ ಹುಣಸಗಿ ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆಗೆ ಬಂದರು. ಅಲ್ಲಿಗೆ ಬಂದೊಡನೆಯೇ ಬಸವಗೌಡರು ಅತ್ಯಂತ ತುರ್ತಿನ ಸವಾಲುಗಳನ್ನು ಸಾಲು ಸಾಲಾಗಿ ಎದುರಿಸಬೇಕಾಯಿತು. ಅಲ್ಲಿನ ಒಟ್ಟು ಏಳು ತರಗತಿಗಳಲ್ಲಿ ನಾನೂರು ವಿದ್ಯಾರ್ಥಿಗಳು ಮತ್ತು ಎಂಟು ಶಿಕ್ಷಕರಿದ್ದರು. ನಾಲ್ಕು ಹುದ್ದೆಗಳು ಖಾಲಿ ಇದ್ದವು. ಆ ಶಾಲೆಯಲ್ಲಿ ಆಡಳಿತಾತ್ಮಕ ಹಾಗೂ ಶೈಕ್ಷಣಿಕ ಪರಿಸರ ಶಾಲೆಯ ಅಭಿವೃದ್ಧಿಗೆ ಸೂಕ್ತವಾಗಿರಲಿಲ್ಲ. ಪರಿಸರ ಗೌಡರಿಗೆ ಪ್ರತಿಕೂಲವಾಗಿತ್ತು. ಇದನ್ನು ಬಸವಗೌಡ ಥಟ್ಟನೆ ಗುರುತಿಸಿದರು.

ಸವಾಲು ಅಗಾಧವಾಗಿದ್ದರೂ ಬಸವಗೌಡರು ಅದನ್ನು ನೇರವಾಗಿ ಎದುರಿಸಲು ತೀರ್ಮಾನಿಸಿದರು. ಶಾಲೆಗೆ ಸಮೀಪ ಇರುವಂತೆ ಮನೆಯನ್ನು ಬದಲಾಯಿಸುವುದು ಅವರ ಕಾರ್ಯತಂತ್ರದ ಮೊದಲ ಹೆಜ್ಜೆಯಾಗಿತ್ತು. ಇದರಿಂದಾಗಿ ಅವರು ಪ್ರತಿದಿನ ಬೆಳಿಗ್ಗೆ ಎಂಟು ಘಂಟೆಗೆ ಶಾಲೆಗೆ ಬರುವುದು ಸಾಧ್ಯವಾಯಿತು. ಗೈರುಹಾಜರಿ, ಅಶಿಸ್ತು, ಪ್ರಾರ್ಥನಾ ಸಭೆಗಳ ಅವ್ಯವಸ್ಥೆ, ಶಾಲೆಯ ನಿರ್ವಹಣೆಯಲ್ಲಿ ಸಿಬ್ಬಂದಿಯ ಸಂಪೂರ್ಣ ನಿರಾಸಕ್ತಿ ಮುಂತಾದ ಸಮಸ್ಯೆಗಳನ್ನು ಎದುರಿಸಲು ಸಾಧ್ಯವಾಯಿತು. ಪ್ರತಿಯೊಬ್ಬ ಶಿಕ್ಷಕರು ಬೆಳಗಿನ ಸಭೆಯಲ್ಲಿ ಹಾಜರಿರಲೇಬೇಕು ಎಂದು ಅವರು ಕಟ್ಟುಪಾಡು ಮಾಡಿದರು. ಶಾಲೆಯ ಹಾಗೂ ಮಧ್ಯಾಹ್ನದ ಬಿಸಿಯೂಟದ ಹಣವನ್ನು ಬಸವಗೌಡರು ತಿಂದುಹಾಕಿದ್ದಾರೆಂದು ಪೊಲೀಸ್ ಠಾಣೆಯಲ್ಲಿ ಯಾರೋ ದೂರು ಕೊಟ್ಟಿದ್ದರು. ಪೊಲೀಸರು ಶಾಲೆಗೆ ಬಂದು ತನ್ನನ್ನು ವಿಚಾರಿಸುವ ಅವಮಾನವನ್ನೂ ಬಸವಗೌಡರು ಎದುರಿಸಬೇಕಾಯಿತು. ಅವರು ಪೊಲೀಸರೊಡನೆ, “ನೀವು ನನ್ನ ಮನೆಗೆ ಹೋಗಿ, ನನ್ನ ಅನುಪಸ್ಥಿತಿಯಲ್ಲಿ ಅಲ್ಲಿ ಹುಡುಕಿರಿ, ಏನಾದರೂ ದೊರೆತರೆ ನನ್ನ ಮೇಲೆ ಕೇಸು ಹಾಕಿರಿ” ಎಂದರು. ಪೊಲೀಸರ ವಿಚಾರಣೆಯಲ್ಲಿ ಬಸವಗೌಡರು ನಿರಪರಾಧಿಗಳೆಂದು ಸಾಬೀತಾಯಿತು. ಇದನ್ನು ಅವರಿಗೆ ಆಗದ ಯಾರೋ ಮಾಡಿರುವುದು ತಿಳಿಯಿತು. ಗೌಡರು ಇದನ್ನು ಅಲ್ಲಿಗೇ ಬಿಡಲಿಲ್ಲ. ತಮ್ಮ ಮೇಲೆ ದೂರು ಕೊಟ್ಟವರನ್ನು ವಿಚಾರಣೆಗೆ ಒಳಪಡಿಸುವಂತೆ ಪೊಲೀಸರನ್ನು ಒತ್ತಾಯಿಸಿದರು. ಇಲಾಖೆಯಿಂದ ತನಿಖೆ ಮಾಡಿಸುವಂತೆ ಡಿಡಿಪಿಐ ಅವರನ್ನೂ ಕೇಳಿಕೊಂಡರು. ಬಸವಗೌಡರ ಆಗಮನದಿಂದ ಅಸಮಾಧಾನಗೊಂಡ ಕೆಲವರು ಈ ಸುಳ್ಳು ದೂರನ್ನು ಕೊಟ್ಟರೆಂದು 2009ರ ನವೆಂಬರ್‌ನಲ್ಲಿ ಸಾಬೀತಾಯಿತು. ಅವರೆಲ್ಲರನ್ನೂ ವರ್ಗಾವಣೆ ಮಾಡಲಾಯಿತು. ಅವರ ಸ್ಥಾನಗಳಿಗೆ ಬೇರೆ ಶಿಕ್ಷಕರು ಬಂದರು.

ಅಷ್ಟೊತ್ತಿಗೆ ಈ ವಿವಾದದ ವಾಸ್ತವವನ್ನು ಸಮುದಾಯವು ಅರ್ಥಮಾಡಿಕೊಂಡು, ಮುಖ್ಯ ಶಿಕ್ಷಕರಿಗೆ ಸ್ಪಂದಿಸಲು ಪ್ರಾರಂಭಿಸಿತು. ಬಸವಗೌಡ ಅವರ ಪ್ರತಿಯೊಂದು ಕೆಲಸವೂ ಶಾಲೆಯಲ್ಲಿ ಉತ್ತಮ ಶಿಕ್ಷಣವನ್ನು ನೀಡುವ ಸಲುವಾಗಿ ಮಾಡಿದ್ದು

ಎಂಬುದು ಸಮುದಾಯದವರಿಗೆ ಮನವರಿಕೆಯಾಯಿತು. ಅವರೊಬ್ಬ ನಿಸ್ಪೃಹ, ಧೈರ್ಯಶಾಲಿ ಆಗಿದ್ದು ಶಾಲೆಯನ್ನು ಅಭಿವೃದ್ಧಿಪಡಿಸುವುದು ಮಾತ್ರ ಅವರ ಉದ್ದೇಶವಾಗಿದ್ದುದರಿಂದ ಜನ ಅವರನ್ನು ಬೆಂಬಲಿಸಿದರು. ಸಮುದಾಯದ ಬೆಂಬಲವನ್ನು ಪಡೆದ ಬಸವಗೌಡರು ಶಾಲಾ ಸುಧಾರಣೆಯ ತಮ್ಮ ಯೋಜನೆಯ ಮುಂದಿನ ಹಂತಕ್ಕೆ ಅಡಿಯಿಟ್ಟರು. ಪಂಚಾಯಿತಿಯಿಂದ ಶಾಲೆಗೆ 2000 ಲೀಟರ್ ಕುಡಿಯುವ ನೀರಿನ ಟ್ಯಾಂಕ್ ಮಂಜೂರು ಮಾಡಿಸಿದರು. ಹಳೆಯ ನಿರುಪಯುಕ್ತ ಪೀಠೋಪಕರಣಗಳು ತುಂಬಿದ್ದ ಕೋಣೆಗಳನ್ನು ಶುಚಿಗೊಳಿಸಿ ಅದನ್ನು ತರಗತಿ ಕೋಣೆಗಳಾಗಿ ಪರಿವರ್ತಿಸಿದರು. ಲಭ್ಯವಿರುವ ಹಣಕಾಸಿನಿಂದ ಹೆಚ್ಚಿನ ತರಗತಿ ಕೋಣೆಗಳನ್ನು ಸಿದ್ಧಪಡಿಸಿದರು. ಇದರ ಪರಿಣಾಮವಾಗಿ ಒಂದು ಕೊಠಡಿ ಮಧ್ಯಾಹ್ನದ ಊಟಕ್ಕೆ ದೊರೆಯಿತು. ಸುಸಜ್ಜಿತ ಶೌಚಾಲಯಗಳನ್ನು ಸಹ ಕಟ್ಟಿಸಿದರು.

ಮೂಲ ಸೌಲಭ್ಯಗಳನ್ನು ಸುಧಾರಿಸಿ ಸಮುದಾಯದ ವಿಶ್ವಾಸಕ್ಕೆ ಚ್ಯುತಿ ಉಂಟುಮಾಡುವುದಿಲ್ಲ ಎಂಬುದನ್ನು ಸಾಬೀತು ಮಾಡಿದ ಮೇಲೆ ಬಸವಗೌಡರು ಶಾಲೆಯನ್ನು ರಾಜಕೀಯ ಮೇಲಾಟದಿಂದ ದೂರ ಇಡುವ ಕಾರ್ಯಕ್ಕೆ ಕೈಯಿಕ್ಕಿದರು. ಅಲ್ಲಿ ತನಕವೂ ಸ್ಥಳೀಯ ರಾಜಕಾರಣಿಗಳು ಶಾಲಾ ಉಸ್ತುವಾರಿ ಸಮಿತಿಯ (SDMC) ಅಧ್ಯಕ್ಷರನ್ನು ನೇಮಿಸುತ್ತಿದ್ದರು. ಈ ಸ್ಥಾನಕ್ಕೆ ಬೇಕಾದ ವ್ಯಕ್ತಿಯನ್ನು ಪೋಷಕರು ಮಾತ್ರ ಚುನಾಯಿಸಬೇಕೆಂದು ಬಸವಗೌಡರು ಪಟ್ಟು ಹಿಡಿದರು. ಇದೊಂದು ನಿರ್ಣಾಯಕವಾದ ಸವಾಲಾಗಿತ್ತು, ಸಮುದಾಯವು ಅವರಲ್ಲಿಟ್ಟಿದ್ದ ವಿಶ್ವಾಸ ಹಾಗೂ ಸದ್ಭಾವನೆಗಳಿಂದಾಗಿ ಇದರಲ್ಲಿಯೂ ಅವರು ಜಯಶಾಲಿಯಾದರು.

ಬಸವಗೌಡರು ಇದೀಗ ಮಕ್ಕಳ ಕಲಿಕೆಯ ಗುಣಮಟ್ಟದತ್ತ ಗಮನ ಹರಿಸಿದರು. ಹೆಚ್ಚು ಉತ್ತಮ ಬೋಧನೆ ಸಾಧ್ಯವಾಗುವಂತೆ ಅವರು ಶಿಕ್ಷಕರನ್ನು ಸಂಘಟಿಸಿದರು. ತಮ್ಮ ನಿರೀಕ್ಷೆಯ ಮಟ್ಟಕ್ಕೆ ಬರುವಂತಾಗಲು ಸಲಹೆ–ಸೂಚನೆಗಳನ್ನು ನೀಡಿದರು. ಶಿಕ್ಷಕರು ತರಗತಿಯಲ್ಲಿ ಮಕ್ಕಳ ಕಲಿಕೆಯತ್ತ ಗರಿಷ್ಠ ಗಮನ ನೀಡುವಂತೆ ಸೂಚಿಸಿದರು. ಕಲಿಕೆಯ ಮಟ್ಟ ಸುಧಾರಿಸಿತು. ಮಕ್ಕಳು ನಮ್ಮೊಡನೆ ಸ್ಪಂದಿಸಿದ ರೀತಿಯಿಂದಲೇ ಅದು ನಮ್ಮ ಅನುಭವಕ್ಕೆ ಬಂತು. ಅವರು ನಮ್ಮೊಡನೆ ಪ್ರಶ್ನೆಗಳನ್ನು ಕೇಳಿದ ರೀತಿಯಿಂದ ಹಾಗೂ ವ್ಯಕ್ತಪಡಿಸಿದ ಅಭಿಪ್ರಾಯಗಳಿಂದ ಇದು ನಿಚ್ಚಳವಾಗುತ್ತಿತ್ತು. ಮಕ್ಕಳಿಗೆ ಪರೀಕ್ಷೆಯ ಭಯ ಇರಲಿಲ್ಲ. ಏನೂ ತಿಳಿಯದ ಮಕ್ಕಳು ಹೇಗೆ ಕಲಿಕೆಯಲ್ಲಿ ಮುಂಚೂಣಿಗೆ ಬಂದರು ಎಂಬುದನ್ನು ತೋರಿಸುವ ವೀಡಿಯೋಗಳನ್ನು ಬಸವಗೌಡರು ಮಕ್ಕಳಿಗೆ ತೋರಿಸಿದ್ದರು. ಅವರು ಪುಸ್ತಕ ಭಂಡಾರವೊಂದನ್ನು ತೆರೆದು ಮಕ್ಕಳು ಓದುವಂತೆಯೂ ಓದಿದ ಆಸಕ್ತಿಯ ವಿಷಯಗಳನ್ನು ಶಾಲಾಸಭೆಯಲ್ಲಿ ವಿವರಿಸುವಂತೆಯೂ ಪ್ರೋತ್ಸಾಹಿಸಿದರು. ಜನಪ್ರಿಯ ರೇಡಿಯೋ ಕಾರ್ಯಕ್ರಮವಾದ 'ಕೇಳಿ–ಕಲಿ'ಯ ಮಾದರಿಯಲ್ಲಿ ತರಗತಿಗಳನ್ನು ಸಂಘಟಿಸಿದ್ದರು. ಶಿಕ್ಷಕರು ಪ್ರತಿ ಮಗುವಿನ ಕಲಿಕೆಯ ಪ್ರಗತಿಯ ದಾಖಲೆಯನ್ನು ತಯಾರು ಮಾಡಿದ್ದು ಸ್ಥಳೀಯ ಪರಿಸರದಿಂದಲೇ ಜ್ಞಾನವೃದ್ಧಿ ಮಾಡಿಕೊಳ್ಳುವಂತಹ ಪ್ರಾಜೆಕ್ಟ್‌ಗಳನ್ನು ಕೊಡುತ್ತಿದ್ದರು. ಈ ಶಾಲೆಯಿಂದ ಪ್ರತಿವರ್ಷ ಕೊನೇಪಕ್ಷ ಹತ್ತು ಮಂದಿ ಮಕ್ಕಳು ಮೊರಾರ್ಜಿ ಶಾಲೆಗೆ

ಪ್ರವೇಶ ಪಡೆಯುತ್ತಿದ್ದಾರೆ. ತಾಲೂಕು ಹಾಗೂ ಜಿಲ್ಲಾ ಮಟ್ಟಗಳಲ್ಲಿ ಎಸ್ಸೆಸ್ಸೆಲ್ಸಿಯಲ್ಲಿ ಮುಂಚೂಣಿಯಲ್ಲಿ ತೇರ್ಗಡೆಗೊಂಡವರು ಹುಣಸಗಿ ಕ್ಯಾಂಪ್ ಶಾಲೆಯಿಂದ ಹೋದವರೇ ಎಂದು ಬಸವಗೌಡ ಅವರು ಹೆಮ್ಮೆಯಿಂದ ಹೇಳುತ್ತಾರೆ. ಅವರು ತಮ್ಮ ಹಳೆ ವಿದ್ಯಾರ್ಥಿಗಳ ಪ್ರಗತಿಯ ಮೇಲೂ ಗಮನ ಇರಿಸಿದ್ದಾರೆ.

ಮಕ್ಕಳ ಸರ್ವತೋಮುಖ ಅಭಿವೃದ್ಧಿಯೇ ತನ್ನ ಗುರಿಯೆಂದೂ ಅದಕ್ಕಾಗಿ ತಾನು ಸಂಕಲ್ಪ ತೊಟ್ಟಿದ್ದೇನೆಂದೂ ಬಸವಗೌಡ ಹೇಳುತ್ತಾರೆ. 'ಮಕ್ಕಳನ್ನು ಒಂದು ದಿನ ನಿಕಟವಾಗಿ ಗಮನಿಸಿದರೆ ಪ್ರತಿಯೊಂದು ಮಗುವಿನಲ್ಲೂ ಕೆಲವೊಂದು ಕೌಶಲಗಳನ್ನು ಗುರುತಿಸಬಹುದು. ಈ ಕೌಶಲಗಳನ್ನು ಗುರುತಿಸಿ ಪೋಷಿಸುವುದು, ಪೂರ್ತಿಯಾಗಿ ಬೆಳೆಯಲು ಅನುವು ಮಾಡಿಕೊಡುವುದು ಶಾಲೆಯ ಕರ್ತವ್ಯ.' ಈ ಸ್ಫೂರ್ತಿಯಿಂದ ಹುಣಸಗಿಯ ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆ ಮಕ್ಕಳನ್ನು ತಯಾರು ಮಾಡುತ್ತಿದೆ. ರಾಜ್ಯ ಶಿಕ್ಷಣ ಇಲಾಖೆಯು ನಡೆಸುವ "ಪ್ರತಿಭಾ ಕಾರಂಜಿ" "ಕಲಿಕೋತ್ಸವ" ಮತ್ತು ಕ್ರೀಡೆಗಳಲ್ಲಿ ಹುಣಸಗಿ ಶಾಲೆ ಭಾಗವಹಿಸುತ್ತಿದೆ. ಈ ಎಲ್ಲ ಕಾರ್ಯಕ್ರಮಗಳಲ್ಲಿ ಶಾಲೆ ಜಿಲ್ಲಾ ಮಟ್ಟದವರೆಗೂ ಅರ್ಹತೆ ಪಡೆದಿದೆ. ಶಾಲೆಗೆ "ಪರಿಸರ ಸ್ನೇಹಿ" ಪ್ರಶಸ್ತಿ ಲಭಿಸಿದೆ. (ಪರಿಸರ ರಕ್ಷಿಸುವ ನಿಟ್ಟಿನಲ್ಲಿ ಶಾಲೆಯ ಪರಿಶ್ರಮಗಳ ಸಲುವಾಗಿ ಈ ಪ್ರಶಸ್ತಿ ಬಂದಿದೆ.)

ಈ ಎಲ್ಲ ಸಾಧನೆಗಳು ಶಿಕ್ಷಕರ ಪರಿಶ್ರಮದಿಂದ ಆಗಿವೆಯೆಂದು ಬಸವಗೌಡ ಹೇಳುತ್ತಾರೆ. "ನನ್ನ ಶಿಕ್ಷಕರ ಬಗ್ಗೆ ನನಗೆ ಸಂತೋಷವಿದೆ. ಅವರು ತುಂಬ ಪ್ರಜ್ಞಾವಂತರು. ಉದಾಹರಣೆಗೆ ಶಿಕ್ಷಕಿ ಈರಕ್ಕ ನಲಿ-ಕಲಿ ಕಾರ್ಯಕ್ರಮದ ಜವಾಬ್ದಾರಿ ಹೊತ್ತಿದ್ದು, 1ರಿಂದ 3ನೇ ತರಗತಿಯ ಮಕ್ಕಳಿಗೆ ಅತ್ಯುತ್ತಮವಾದ ಭಾಷಾಜ್ಞಾನ ಮತ್ತು ವಿಷಯ ಗ್ರಹಿಕೆಯ ಅಡಿಪಾಯವನ್ನು ಒದಗಿಸುತ್ತಾರೆ. ವಿಜ್ಞಾನದ ಶಿಕ್ಷಕಿ ಸುನೀತಾ, ಸಮಾಜ ವಿಜ್ಞಾನ ಶಿಕ್ಷಕಿ ಸುವರ್ಣ ಮತ್ತು ಭಾಷಾ ಶಿಕ್ಷಕಿ ಗೀತಾ ಎಲ್ಲರೂ ಚೆನ್ನಾಗಿ ಕಾರ್ಯ ನಿರ್ವಹಿಸುತ್ತಿದ್ದಾರೆ" ಎಂದು ಬಸವಗೌಡರು ಶಾಲೆಯ ಶ್ರೇಯಸ್ಸನ್ನು ಸಹೋದ್ಯೋಗಿಗಳೊಂದಿಗೆ ಹಂಚಿಕೊಂಡರು. ಅವರು ನಿಯಮಿತವಾದ ಶಿಕ್ಷಕರ ಸಭೆಗಳ ವ್ಯವಸ್ಥೆಯನ್ನು ರೂಪಿಸಿದ್ದಾರೆ. ಅದು ಪ್ರತಿ ವಾರವೂ ನಡೆಯಬೇಕೆಂದು ಅವರು ಒತ್ತಾಯಿಸುತ್ತಿದ್ದರು. ಈಗ ಅದನ್ನು ಹದಿನೈದು ದಿನಗಳಿಗೊಮ್ಮೆ ನಡೆಸಲಾಗುತ್ತಿದೆ. ಈ ಸಭೆಗಳನ್ನು ವೃತ್ತಿಪರವಾಗಿ ನಿರ್ವಹಿಸಲಾಗುತ್ತಿದ್ದು ಇವುಗಳಲ್ಲಿ ನಿರ್ದಿಷ್ಟವಾದ ಕಾರ್ಯಸೂಚಿ ಇರುತ್ತದೆ. ಹಿಂದಿನ ಸಭೆಗಳ ಪುನರವಲೋಕನ, ಕಲಾಪಗಳ ದಾಖಲಾತಿ, ಮುಂದಿನ ಕ್ರಮಗಳು – ಇವುಗಳ ಬಗ್ಗೆ ಚರ್ಚಿಸಲಾಗುತ್ತದೆ. ಶಾಲೆಯಲ್ಲಿಟ್ಟಿದ್ದ ರಿಜಿಸ್ಟರ್ ಪುಸ್ತಕವನ್ನು ನೋಡುವ ಅವಕಾಶ ನನಗೆ ಒದಗಿತು. ಅದರಲ್ಲಿ ಈ ಸಭೆಗಳ ಗಾಂಭೀರ್ಯವನ್ನೂ ಪರಿಶ್ರಮವನ್ನೂ ಕಾಪಾಡಿಕೊಂಡು ಬಂದಿರುವುದು ಗೋಚರಿಸುತ್ತಿತ್ತು. ಶಿಕ್ಷಕರು ಪಠ್ಯ ಯೋಜನೆಗಳು ಮತ್ತು ಪರೀಕ್ಷೆಗಳ ತಯಾರಿಯನ್ನು ಒಂದು ತಂಡದಂತೆ ಪುನರವಲೋಕನ ಮಾಡುತ್ತಾರೆ. ಮಕ್ಕಳ ಪ್ರಗತಿಯ ಬಗ್ಗೆ ಪೋಷಕರಿಗೆ ಅರಿವು ಮೂಡಿಸಲು ಎರಡು ತಿಂಗಳಿಗೊಮ್ಮೆ ಪೋಷಕರ ಸಭೆಗಳನ್ನು ನಡೆಸುತ್ತಾರೆ.

ಮಕ್ಕಳ ಸಾಮರ್ಥ್ಯವನ್ನು ಸಮುದಾಯಕ್ಕೆ ತೋರಿಸಲು ಕಳೆದ ಕೆಲವು ವರ್ಷಗಳಲ್ಲಿ ಶಾಲೆಯು ಮೇಳಗಳ ಸರಣಿಯನ್ನೇ ಸಂಘಟಿಸಿತ್ತು. ಪರಿಸರ ಮೇಳದ ಅನಂತರ

ವಿಜ್ಞಾನ ಮೇಳವನ್ನು ನಡೆಸಲಾಯಿತು. ಈ ಮೇಳಗಳಲ್ಲಿ ಜನರು ತುಂಬು ಹೃದಯದಿಂದ, ತಲ್ಲೀನತೆಯಿಂದ ಭಾಗವಹಿಸಿದರು. ತಮ್ಮ ಹಳ್ಳಿಯ ಮಕ್ಕಳು ಅಷ್ಟೊಂದು ಚುರುಕಾಗಿ ಪರಿಕಲ್ಪನೆಗಳನ್ನು ವಿವರಿಸುವುದನ್ನು ನೋಡಿ ಜನ ಚಕಿತರಾದರು. ಈ ಮಕ್ಕಳನ್ನು ಸಮೀಪದ ಖಾಸಗಿ ಶಾಲೆಯಿಂದ ಮೇಳಕ್ಕಾಗಿ ಕರೆತಂದಿದ್ದಾರೆಯೇ ಎಂದೂ ಕೆಲವರು ಕೇಳಿದರು! ಶಾಲೆಯ ಸಾಧನೆಗಳು ಮತ್ತು ಚಟುವಟಿಕೆಗಳನ್ನು ಇದೀಗ ಪಂಚಾಯಿತಿಯಲ್ಲಿಯೂ ಚರ್ಚಿಸಲಾಗುತ್ತಿದೆ.

ಹುಣಸಗಿ ಶಾಲೆಯ ಮಕ್ಕಳ ಸಂಖ್ಯೆ ಈಗ ನಾನೂರ ಅರುವತ್ತೆರಡು. ಅಲ್ಲಿನ ಶಿಕ್ಷಕರ ಸಂಖ್ಯೆ ಹದಿಮೂರು. ಬಹಳಷ್ಟು ದಿನಗಳು ಅಲ್ಲಿನ ಮಕ್ಕಳ ಹಾಜರಾತಿ ಶೇಕಡ 85ಕ್ಕಿಂತ ಹೆಚ್ಚೇ ಇರುತ್ತದೆ. ಈ ಶಾಲೆಯ ಸುತ್ತಮುತ್ತಲಿನ ಖಾಸಗಿ ಶಾಲೆಗಳು, ಅಲ್ಲಿಂದ ವಿದ್ಯಾರ್ಥಿಗಳನ್ನು ಪೋಷಕರು ಬಿಡಿಸುತ್ತಿರುವುದರಿಂದ ಮುಚ್ಚಿಕೊಂಡು ಹೋಗುತ್ತಿವೆ. ಇದೀಗ ಶಾಲೆಗೆ ಸೋಸಿದ ಕುಡಿಯುವ ನೀರಿನ ಘಟಕವು ಬೇಕೆಂದು ಬಸವಗೌಡರು ಒತ್ತಾಯಿಸುತ್ತಿದ್ದಾರೆ. ಪಂಚಾಯಿತಿ ಮತ್ತು ಸಮುದಾಯವು ಈ ಮನವಿಯನ್ನು ಒಪ್ಪದಿದ್ದರೆ ತಾವು ಶಾಲೆಯನ್ನೇ ಬಿಡುವುದಾಗಿ ಬೆದರಿಕೆ ಹಾಕಿದ್ದಾರೆ!

ಇದೆಲ್ಲದರ ನಡುವೆಯೂ ಬಸವಗೌಡರು ಸತತವಾಗಿ ತಮ್ಮ ಕಲಿಕೆಯನ್ನು ಮುಂದುವರಿಸಿದ್ದಾರೆ. ಅವರಿಗೆ ಕೆಲವು ವಿಷಯಗಳಿಗೆ ಸಂಬಂಧಿಸಿದಂತೆ ಕಂಪ್ಯೂಟರ್ ಬಳಕೆ ತಿಳಿದಿದೆ. ಕಂಪ್ಯೂಟರ್ ಬಳಸುವುದನ್ನು ಕಲಿಯುವಂತೆ ಅವರು ತಮ್ಮ ಮೂವರು ಶಿಕ್ಷಕರನ್ನು ಪ್ರೋತ್ಸಾಹಿಸಿದ್ದಾರೆ. ಅವರು ಫೌಂಡೇಷನ್ ನಡೆಸಿದ ಶಾಲಾ ನಾಯಕತ್ವ ಅಭಿವೃದ್ಧಿ ಕಾರ್ಯಕ್ರಮ (ಎಸ್ಎಲ್‌ಡಿಪಿ)ದಲ್ಲಿ ಭಾಗವಹಿಸಿದ್ದಾರೆ. ಈ ಕಾರ್ಯಕ್ರಮ ಅತ್ಯಂತ ಉಪಯುಕ್ತವೆಂದು ಹೇಳುತ್ತಾರೆ. ಅವರ ಶಿಕ್ಷಕರೂ ಅವರ ಮೇಲ್ಪಂಕ್ತಿ ಅನುಸರಿಸಿ ಫೌಂಡೇಷನ್ ನಡೆಸುತ್ತಿರುವ ಸ್ವಯಂಪ್ರೇರಿತ ಶಿಕ್ಷಕ ವೇದಿಕೆ (ವಿಟಿಎಫ್) ಹಾಗೂ ಇತರ ಎಲ್ಲ ಕಾರ್ಯಾಗಾರಗಳಲ್ಲಿ ಸಕ್ರಿಯವಾಗಿ ಭಾಗವಹಿಸುತ್ತಾರೆ. ಕಕ್ಕೆರದಲ್ಲಿರುವ ಶಿಕ್ಷಕರ ಕಲಿಕಾ ಕೇಂದ್ರ (ಟಿಎಲ್‌ಸಿ)ಗಳಿಗೆ ನಿಯತವಾಗಿ ಭೇಟಿ ನೀಡುತ್ತಾರೆ. ತಮ್ಮ ತರಗತಿಯ ಕಾರ್ಯಗಳಿಗೆ ಬೇಕಾದ ಸೂಕ್ತವಾದ ಸಾಮಗ್ರಿಗಳನ್ನು ರಚಿಸಲು ಸಲಹೆ-ಸೂಚನೆ ಪಡೆದುಕೊಳ್ಳುತ್ತಾರೆ. ಟಿಎಲ್‌ಸಿಯಲ್ಲಿನ ಸಂವಾದಗಳಲ್ಲಿ ಅವರ ನಿಯಮಿತವಾದ ಭಾಗವಹಿಸುವಿಕೆಯ ಪರಿಣಾಮವಾಗಿ ಅಲ್ಲಿರುವ ವಸ್ತುಗಳು, ಪುಸ್ತಕಗಳು ಮತ್ತು ಉಪಕರಣಗಳನ್ನು ಬಳಸಿಕೊಳ್ಳುವುದಕ್ಕೆ ಅವರಿಗೆ ಸಾಧ್ಯವಾಗಿದೆ. ನಲಿ-ಕಲಿ ಬೋಧನವಿಧಾನವನ್ನು 1ರಿಂದ 3ನೇ ತರಗತಿಗಳಿಗೆ ಹೇಳಿಕೊಡುವ ಶಿಕ್ಷಕಿ ಈರಕ್ಕ ಸುರಪುರದ ಅತ್ಯುತ್ತಮ ನಲಿ-ಕಲಿ ಶಿಕ್ಷಕಿ ಎಂಬ ಪ್ರಶಸ್ತಿಯನ್ನು 2011ರಲ್ಲಿ ಪಡೆದರು. ಬಸವಗೌಡರು ಚೈತನ್ಯಶೀಲ ವಿಚಾರಭರಿತ ವ್ಯಕ್ತಿ. ಆ ಊರಿನ ಮಕ್ಕಳಿಗೆ ಇಂಗ್ಲಿಷ್ ಭಾಷೆಯ ಪರಿಚಯ ಮಾಡಿಸುವ ಉದ್ದೇಶವನ್ನು ಹೊಂದಿರುವ ಅವರು ಅನಧಿಕೃತ ನೆಲೆಯಲ್ಲಿ ಎಲ್‌ಕೆಜಿ ಹಾಗೂ ಯುಕೆಜಿ ತರಗತಿಗಳನ್ನು ತೆರೆಯುವ ಉತ್ಸಾಹದಲ್ಲಿದ್ದಾರೆ. ಇದನ್ನು ಅವರು ವೈಯಕ್ತಿಕ ನೆಲೆಯಲ್ಲಿ ತನ್ನದೇ ಹಣದಿಂದ ಮಾಡಲಿದ್ದಾರೆ. ಇದರ ಹಿನ್ನೆಲೆಯ ಬಗ್ಗೆ ಕೇಳಿದಾಗ ಅವರು ಹೇಳಿದ ಮಾತು ಇದು: "ನಾನು ಕೂಡಾ ಒಂದು ಬಡ ಕುಟುಂಬದಲ್ಲಿ ಹುಟ್ಟಿದವನು. ಪ್ರೌಢಶಾಲೆವರೆಗೂ ನಾನು

ಹರಿದ ಷರಟಿಗೆ ತೇಪೆ ಹಾಕಿಕೊಂಡು ಹೋಗುತ್ತಿದ್ದೆ. ಆ ಹೀನ ಸ್ಥಿತಿಯಿಂದ ಹೊರಗೆ ಬರಲು ನನಗೆ ಶಿಕ್ಷಣ ಸಹಾಯ ಮಾಡಿತು. ಹುಣಸಗಿಯ ಮಕ್ಕಳಿಗೂ ಬಡತನದಿಂದ ಮೇಲೆದ್ದು ಬರಲು ಅವಕಾಶ ಸಿಗಬೇಕು ಎಂದೇ ಇದನ್ನು ಮಾಡುತ್ತಿದ್ದೇನೆ." ನರ್ಸರಿ ಶಾಲೆಯು ಮಗುವಿನಲ್ಲಿ ಎಳವೆಯಿಂದಲೇ ಶಾಲೆಗೆ ಹೋಗುವ ರೂಢಿಯನ್ನು ಬೆಳೆಸುತ್ತದೆ ಎಂದು ಅವರು ನಂಬಿದ್ದಾರೆ. ಮಾಸಿಕ 1,100 ರೂಪಾಯಿ ಸಂಬಳದೊಂದಿಗೆ ಜೀವನ ಪ್ರಾರಂಭಿಸಿದ ತಾನು ಈಗ 35,000 ರೂಪಾಯಿ ಸಂಪಾದಿಸುತ್ತಿದ್ದೇನೆ, ಇದು ಬೇಕಾದಷ್ಟಾಯಿತು, ಇದರಿಂದಲೇ ಸ್ವಲ್ಪ ಹಣ ಈ ನರ್ಸರಿ ಶಾಲೆಗೂ ವ್ಯಯ ಮಾಡುತ್ತೇನೆ. ಅಲ್ಲದೆ ತನಗೆ ಹತ್ತರಿಂದ ಹನ್ನೆರಡು ಎಕರೆ ಕೃಷಿ ಜಮೀನೂ ಇದೆ. ಅದರಿಂದಲೂ ಆದಾಯ ಬರುತ್ತಿದೆ; ಈ ನರ್ಸರಿಯ ಆಲೋಚನೆ ಉಂಟಾದುದಕ್ಕೆ ಅದೂ ಕಾರಣ ಎಂದು ಬಸವಗೌಡರು ಹೇಳುತ್ತಾರೆ.

ಕರ್ನಾಟಕ ರಾಜ್ಯ ಗುಣಮಟ್ಟ ಮೌಲ್ಯಮಾಪನ ಮತ್ತು ಮಾನ್ಯತಾ ಮಂಡಳಿಯ (ಕೆಎಸ್‌ಕ್ಯೂಎಎಸಿ) 2016ರ ಮೌಲ್ಯಮಾಪನದಲ್ಲಿ ಹುಣಸಗಿ ಶಾಲೆಗೆ ಬಿ+ ದೊರೆತದ್ದು ಗೌಡರ ಮನಸ್ಸನ್ನು ಕೊರೆಯುತ್ತಿದೆ. "ಹುಣಸಗಿ ಶಾಲೆಯನ್ನು ಮಾದರಿ ಶಾಲೆಯನ್ನಾಗಿ ಮಾಡುವುದೇ ನನ್ನ ಗುರಿ" ಎಂದು ಈ ಧೀರ, ಪ್ರಾಮಾಣಿಕ ಶಾಲಾ ಮುಖ್ಯೋಪಾಧ್ಯಾಯ ಹೇಳುತ್ತಾರೆ.